**ದಿನಾಂಕಃ09.08.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು ಎದುರುದಾರಾದ 2(ಎ ಯಿಂದ ಸಿ) ಪರವಾಗಿ ಶ್ರೀಃ ವಕೀಲರಿಂದಃ-**

ಈ ನ್ಯಾಯಾಲಯದಿಂದ ಪಡೆದಂತಹ ತಾತ್ಕಾಲಿಕ ನಿರ್ಭಂದ ಕಾಜ್ಞೆಯ ಆದೇಶವನ್ನು ಉಪನೋಂದಣಾಧಿಕಾರಿ ಕಚೇರಿಗೆ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಆ ಆದೇಶವಾದಾಗ ಮೂಲ ದಾವೆಯಲ್ಲಿ ಪ್ರತಿವಾದಿಗಳಾಗಿದ್ದವರು ಒಬ್ಬ ಅನಂತಸ್ವಾಮಿ, ಗುರುಮೂರ್ತಿ, ನಂಜುಂಡಸ್ವಾಮಿ ಮತ್ತು ಲಲಿತಮ್ಮ ಇವರು ಪಕ್ಷಗಾರರಾಗಿದ್ದರು. ತಾತ್ಕಾಲಿಕ ನಿರ್ಭಂದ ಕಾಜ್ಞೆಯಾದ ಆದೇಶವನ್ನು ಅವರಿಗೆ ಬರವಣಿಗೆಯಲ್ಲಿ ತಿಳಿಸಲಿಲ್ಲ, ಆದರೆ ಅಂಚೆ ಮುಖಾಂತರ ನೋಟಿಸ್ ಕಳುಹಿಸಿದ್ದೇನೆ. ಅಂಚೆ ಮುಖಾಂತರ ನೋಟಿಸ್ ಕಳುಹಿಸಿದ್ದ ಬಗ್ಗೆ ದಾಹಲೆ ಇದಿಯೋ, ಇಲ್ಲವೋ ಎಂದು ಮರೆತುಹೋಗಿದೆ ಎಂದು ಹೇಳುತ್ತಾರೆ. ನ್ಯಾಯಾಲಯದಿಂದ ತಾತ್ಕಾಲಿಕ ನಿರ್ಭಂದ ಕಾಜ್ಞೆಯ ಆದೇಶವಾದ ಬಗ್ಗೆ ಅನಂತಸ್ವಾಮಿ, ಗುರುಮೂರ್ತಿ, ನಂಜುಂಡಸ್ವಾಮಿ ಮತ್ತು ಲಲಿತಮ್ಮ ಬರವಣಿಗೆ ಮುಖಾಂತರ ಯಾವುದೇ ಮಾಹಿತಿ ಕೊಟ್ಟಿಲ್ಲ ಎಂದರೆ ಸುಳ್ಳು. ಕ್ರಯ ಪತ್ರದಲ್ಲಿ ಅನಂತಸ್ವಾಮಿ, ಗುರುಮೂರ್ತಿ, ನಂಜುಂಡಸ್ವಾಮಿ ಮತ್ತು ಲಲಿತಮ್ಮ ಇವರ ಸಹಿ ಇದಿಯಾ ಎಂದರೆ ಸಾಕ್ಷಿ ನಿಪಿ.1 ರಲ್ಲಿ ಇಲ್ಲ ಎಂದು ಹೇಳುತ್ತಾರೆ. ದಿಃ 12.09.2005 ರ ಕ್ರಯ ಪತ್ರದ ವಿಚಾರ ಗುರುಮೂರ್ತಿ ಮತ್ತು ಅವರ ಮನೆಯವರಿಗೆ ಗೊತ್ತಿರಲಿಲ್ಲ ಎಂದರೆ ಸುಳ್ಳು. ನಿಪಿ.1 ರಲ್ಲಿ ನನ್ನ ಅಣ್ಣನ ರುಜು ಇದೆಯೋ, ಇಲ್ಲವೋ ನನಗೆ ಗೊತ್ತಾಗುತ್ತಿಲ್ಲ. ನನ್ನ ದೊಡ್ಡ

ಅಣ್ಣ ಅನಂತಸ್ವಾಮಿ ಇವರ ಮುಖಾಂತರ ಗುರುಮೂರ್ತಿ ಇವರಿಗೆ ಗೊತ್ತಾಗಿದೆ ಎಂದು ಹೇಳುತ್ತಾರೆ. ನನ್ನ ಅಕ್ಕ ಲಲಿತಮ್ಮ ಇವರು ನನ್ನ ಅಣ್ಣ ತಮ್ಮಂದಿರಿಗೆ ಈ ವಿಚಾರವನ್ನು ಹೇಳುತ್ತಿದ್ದರು. ಲಲಿತಮ್ಮನಿಗೆ ಈ ವಿಚಾರ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ ನನಗೆ ಗೊತ್ತಾಗುತ್ತಿಲ್ಲ ಎಂದು ಹೇಳುತ್ತಾರೆ. ಈ ವಿಚಾರ ನನಗೆ ಗೊತ್ತಾಗದೆ ಇದ್ದರು, ಅವರು ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿದ್ದಾರೆ ಎಂದು ಈ ಅರ್ಜಿಯನ್ನು ಹಾಕಿದ್ದೇನೆ ಎಂದರೆ ಸರಿ.

ನಿಪಿ.3 ರಲ್ಲಿ ಇರುವಂತಹ ಜಮೀನು ಖುಷ್ಕಿ ( ಒಣ ಭೂಮಿ). ನಿಪಿ.3 ರಲ್ಲಿ ಇರುವಂತಹ ಆಸ್ತಿಯನ್ನು ಗುರುಮೂರ್ತಿ ಇವರು ಯಾವಾಗ ಖರೀದಿ ಹಿಡಿದರು ಎಂದು ಮರೆತುಹೋಗಿದೆ. ಆ ಆಸ್ತಿಯನ್ನು ಯಾವ ಇಸವಿಯಲ್ಲಿ ಮೂಲ ದಾವೆಯಲ್ಲಿ ಇದನ್ನು ಸೇರಿಸಲಾಗಿದೆ ಎಂದರೆ ಸಾಕ್ಷಿ ದಿಃ05.07.2004 ರಲ್ಲಿ ಸೇರಿಸಲಾಗಿದೆ ಎಂದು ಹೇಳುತ್ತಾರೆ. ಮೂಲ ದಾವಾ ಪತ್ರದಲ್ಲಿ ಈ ಆಸ್ತಿಯನ್ನು ಸೇರಿಸಲಿಲ್ಲ ಎಂದರೆ ಸುಳ್ಳು. ಮೂಲ ದಾವೆಯಲ್ಲಿ ಒಂದು ತಿದ್ದುಪಡಿಗೆ ಅರ್ಜಿಯನ್ನು ಸಲ್ಲಿಸಿ 2017 ರಲ್ಲಿ ನಿಪಿ.3 ಕಾಣಿಸಿದ ಆಸ್ತಿಯನ್ನು ಸೇರಿಸಿದ್ದೇವೆ ಎಂದರೆ ಸುಳ್ಳು. ಗುರುಮೂರ್ತಿ ಇವರು ನಿಪಿ.3 ರಲ್ಲಿ ಇರುವಂತಹ ಆಸ್ತಿಯನ್ನು ದಿಃ02.04.2016 ರಂದು ಮಾರಾಟ ಮಾಡಿದ್ದಾರೆ. ದಿಃ 02.04.2016 ರಲ್ಲಿ ನಿಪಿ.3 ರಲ್ಲಿ ಇರುವಂತಹ ಆಸ್ತಿಗಳು ಮೂಲ ದಾವೆಯಲ್ಲಿ ಸೇರಿಸಿರಲಿಲ್ಲ ಎಂದರೆ ಸುಳ್ಳು. ನಿಪಿ.3 ರಲ್ಲಿ ಕಾಣಿಸಿದ ಆಸ್ತಿಗಳು ಗುರುಮೂರ್ತಿ ಇವರು 2006 ರ ನಂತರ ಖರೀದಿ ಹಿಡಿದರು ಎಂದರೆ ಸುಳ್ಳು. ನಿಪಿ.3 ಖರೀದಿ ಪತ್ರವನ್ನು ನಾನು ಓದಿ

ತಿಳಿದುಕೊಂಡಿದ್ದೇನೆ. ಅದರಲ್ಲಿ ಗುರುಮೂರ್ತಿ ಇವರು ನಿಪಿ.3 ರಲ್ಲಿ ಕಾಣಿಸಿದ ಆಸ್ತಿಗಳನ್ನು ಯಾವ ಇಸವಿಯಲ್ಲಿ ಯಾರಿಂದ, ಯಾವಾಗ ಖರೀದಿಸಿದ್ದಾರೆ ಎನ್ನುವ ವಿಚಾರ ನಿಪಿ.3 ರಲ್ಲಿ ನಮೂದಾಗಿದೆ ಎಂದರೆ ಸಾಕ್ಷಿ ಮರೆತಿದ್ದೇನೆ ಎಂದು ಹೇಳುತ್ತಾರೆ. ನಾನು ಈ ಕೇಸ್ ನಲ್ಲಿ ನಮಗೆ ಕಾನೂನು ಪ್ರಕಾರ ಬರಬೇಕಾದ ಭಾಗವನ್ನು ಕೇಳಿದ್ದೇನೆ. ಆನಂದ್ ಎಂಟರ್ ಪ್ರೈಸ್ಸ್ ಇವರು ನನಗೆ ಗೊತ್ತಿದ್ದಾರೆ.

**(ಈ ಹಂತದಲ್ಲಿ ಎದುರುದಾರರ ಪರವಕೀಲರು ಮುಂದುವರೆದ ಪಾಟೀ ಸವಾಲಿಗೆ ಮನವಿಮಾಡಿರುತ್ತಾರೆ. ಮನವಿಯನ್ನು ಅಂಗಿಕರಿಸಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಶ್ರೀನಿವಾಸ)**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**